ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/324/ಸಕಾಲ/ಸೇವಿ-1/2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:15.02.2018.

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ ಮತ್ತು ಕಾಲೇಜುಗಳಲ್ಲಿ ಸಕಾಲ ಸೇವೆಗಳನ್ನು ಅನುಷ್ಠಾನಗೊಳಿಸುವ ಕುರಿತು.

** ****

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಸಕಾಲ ಸೇವೆಗಳಡಿಯಲ್ಲಿ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವ 18 ಸೇವೆಗಳನ್ನು ಸಕಾಲ ವ್ಯಾಪ್ತಿಯಲ್ಲಿ ಅಧಿಸೂಚನೆಗೊಳಿಸಲಾಗಿದ್ದು, ಈ ಮಾಹಿತಿಯನ್ನು ಕಛೇರಿ/ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಯವರ ಗಮನಕ್ಕೆ ತರಲು ಸೂಚಿಸಲಾಗಿದೆ. ಮುಂದುವರೆದು ಸಕಾಲ ಸೇವೆಯನ್ನು ತುರ್ತಾಗಿ ಅನುಷ್ಠಾನಗೊಳಿಸಲು ಪ್ರಾದೇಶಿಕ ಕಛೇರಿಗಳಲ್ಲಿ ಜಂಟಿ ನಿರ್ದೇಶಕರು ವ್ಯವಸ್ಥಾಪಕರು ಮತ್ತು ಬೆರಳಚ್ಚುಗಾರರು ಹಾಗೂ ಕಾಲೇಜುಗಳಲ್ಲಿ ಪ್ರಾಂಶುಪಾಲರು, ವ್ಯವಸ್ಥಾಪಕರು/ಅಧೀಕ್ಷಕರು/ವಿಷಯನಿರ್ವಾಹಕರು ಮತ್ತು ಬೆರಳಚ್ಚುಗಾರರನ್ನು ಈ ಯೋಜನೆ ಜಾರಿಗೊಳಿಸುವ ಕುರಿತಂತೆ ಸಕ್ಷಮ ಪ್ರಾಧಿಕಾರವೆಂದು ಗುರುತಿಸಿದ್ದು ಇವರಿಗೆ ಸಕಾಲ ಯೋಜನೆಯಡಿಯಲ್ಲಿ ತರಬೇತಿ ನೀಡಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಪ್ರತಿ ಕಾಲೇಜಿನಲ್ಲಿ ಮೇಲಿನಂತೆ ತಿಳಿಸಿರುವವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ DCE Websiteನಲ್ಲಿರುವ Google formನಲ್ಲಿ ಅಪಲೋಡ್‌ನ್ನು ದಿನಾಂಕ:17.02.2018ರ ಮಧ್ಯಾಹ್ನದೊಳಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

Sulpa
ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಕಾಲೇಜು ಪ್ರಾಂಶುಪಾಲರಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

ಪ್ರತಿ:

1. ಮಾನ್ಯ ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
2. ಕಛೇರಿ ಪ್ರತಿ.

## V – ಉನ್ನತ ಶಿಕ್ಷಣ ಇಲಾಖೆಯ – "ಕಾಲೇಜು ಶಿಕ್ಷಣ ಇಲಾಖೆ *

| ಕ್ರ ಸಂ. | ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತು ಮಾಡಿದ ಕಾಲ | ಸಕ್ಷಮ ಅಧಿಕಾರಿ | ಸಕ್ಷಮ ಅಧಿಕಾರಿಯು ವಿಲೆ ಮಾಡುವುದಕ್ಕೆ ಕಾಲ ಮಿತಿ | ಮೇಲ್ಮನವಿ ಪ್ರಾಧಿಕಾರ | ಮೇಲ್ಮನವಿ ಪ್ರಾಧಿಕಾರಿಯು ವಿಲೆ ಮಾಡುವುದಕ್ಕೆ ಕಾಲಮಿತಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಪ್ರವೇಶಾತಿ ಪಟ್ಟಿ | ಪ್ರಾಂಶುಪಾಲರು | 5 ದಿನಗಳು | ಜಂಟಿ ನಿರ್ದೇಶಕರು | 5 ದಿನಗಳು | ನಿರ್ದೇಶಕರು | 10ದಿನಗಳು |
| 2 | ವಿದ್ಯಾರ್ಹತೆ ಪ್ರಮಾಣ ಪತ್ರ | ಪ್ರಾಂಶುಪಾಲರು | 5 ದಿನಗಳು | ಜಂಟಿ ನಿರ್ದೇಶಕರು | 5 ದಿನಗಳು | ನಿರ್ದೇಶಕರು | 7 ದಿನಗಳು |
| 3 | ತಾತ್ಕಾಲಿಕ ಪದವಿ ಪ್ರಮಾಣ ಪತ್ರ | ಪ್ರಾಂಶುಪಾಲರು | 7 ದಿನಗಳು | ಜಂಟಿ ನಿರ್ದೇಶಕರು | 7 ದಿನಗಳು | ನಿರ್ದೇಶಕರು | 7 ದಿನಗಳು |
| 4 | ಗ್ರಂಥಾಲಯ ಬೇಬಾಕಿ ಪ್ರಮಾಣಪತ್ರ | ಪ್ರಾಂಶುಪಾಲರು | 5 ದಿನಗಳು | ಜಂಟಿ ನಿರ್ದೇಶಕರು | 7 ದಿನಗಳು | ನಿರ್ದೇಶಕರು | 5 ದಿನಗಳು |
| 5 | ಬೇಬಾಕಿ ಪ್ರಮಾಣಪತ್ರ | ಪ್ರಾಂಶುಪಾಲರು | 5 ದಿನಗಳು | ಜಂಟಿ ನಿರ್ದೇಶಕರು | 5 ದಿನಗಳು | ನಿರ್ದೇಶಕರು | 5 ದಿನಗಳು |
| 6 | ಅಂಕಪಟ್ಟಿ ವಿತರಣೆ | ಪ್ರಾಂಶುಪಾಲರು | 6 ದಿನಗಳು | ಜಂಟಿ ನಿರ್ದೇಶಕರು | 6 ದಿನಗಳು | ನಿರ್ದೇಶಕರು | 6 ದಿನಗಳು |
| 7 | ಪದವಿ ಪ್ರಮಾಣ ಪತ್ರ ವಿತರಣೆ | ಪ್ರಾಂಶುಪಾಲರು | 5 ದಿನಗಳು | ಜಂಟಿ ನಿರ್ದೇಶಕರು | 6 ದಿನಗಳು | ನಿರ್ದೇಶಕರು | 6 ದಿನಗಳು |
| 8 | ವರ್ಗಾವಣೆ ಪ್ರಮಾಣ ಪತ್ರ ರವಾನೆ | ಪ್ರಾಂಶುಪಾಲರು | 6 ದಿನಗಳು | ಜಂಟಿ ನಿರ್ದೇಶಕರು | 6 ದಿನಗಳು | ನಿರ್ದೇಶಕರು | 6 ದಿನಗಳು |
| 9 | ವಿವಿಧ ಬಗೆಯ ರಜೆಗಳ ಮಂಜೂರಾತಿ | | | | | | |
| a | ಸಾಂದರ್ಭಿಕ ರಜೆ/ನಿರ್ಬಂಧಿತ ರಜೆ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 3 ದಿನಗಳು | ನಿರ್ದೇಶಕರು | 6 ದಿನಗಳು | ಆಯುಕ್ತರು | 6 ದಿನಗಳು |
| b | ಗಳಿಕೆ ರಜೆ/ಪರಿವರ್ತಿತ ರಜೆ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 15 ದಿನಗಳು | ನಿರ್ದೇಶಕರು | 15 ದಿನಗಳು | ಆಯುಕ್ತರು | 15 ದಿನಗಳು |
| c | ವಿಶೇಷ ಸಾಂದರ್ಭಿಕ ರಜೆ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 15ದಿನಗಳು | ನಿರ್ದೇಶಕರು | 15 ದಿನಗಳು | ಆಯುಕ್ತರು | 15 ದಿನಗಳು |
| d | ಅಸಾಧಾರಣ ರಜೆ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 30 ದಿನಗಳು | ನಿರ್ದೇಶಕರು | 30 ದಿನಗಳು | ಆಯುಕ್ತರು | 30 ದಿನಗಳು |
| e | ಹೆರಿಗೆ ರಜೆ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 6 ದಿನಗಳು | ನಿರ್ದೇಶಕರು | 6 ದಿನಗಳು | ಆಯುಕ್ತರು | 6 ದಿನಗಳು |
| f | ಪಿತೃತ್ವ ರಜೆ | ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 6 ದಿನಗಳು | ನಿರ್ದೇಶಕರು | 6 ದಿನಗಳು | ಆಯುಕ್ತರು | 6 ದಿನಗಳು |
| 10 | ಗಳಿಕೆ ರಜೆ ನಗದೀಕರಣ | ಮು.ಅ.ಅ<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 30ದಿನಗಳು | ನಿರ್ದೇಶಕರು | 15 ದಿನಗಳು | ಆಯುಕ್ತರು | 15 ದಿನಗಳು |
| 11 | ಕುಟುಂಬ ಯೋಜನ ಅನುಸರಣೆಗೆ ವಿಶೇಷ ಭತ್ಯೆ ಮಂಜೂರಾತಿ | ನಿರ್ದೇಶಕರು | 30 ದಿನಗಳು | ಆಯುಕ್ತರು | 15 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು |
| 12 | ರಜೆ ಪ್ರಯಾಣ/ಸ್ವಸ್ಥಳ ಪ್ರಯಾಣ ರಿಯಾಯಿತಿ ಮಂಜೂರಾತಿ | ನಿರ್ದೇಶಕರು<br>ನಿರ್ದೇಶಕರು<br>ಜಂಟಿ ನಿರ್ದೇಶಕರು | 15 ದಿನಗಳು | ಆಯುಕ್ತರು | 15 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 15 ದಿನಗಳು |

| | | | | | | | |
|---|---|---|---|---|---|---|---|
| 13 | ಅಂಗವಿಕಲ ಭತ್ಯೆ ಮಂಜೂರಾತಿ | ನಿರ್ದೇಶಕರು | 90 ದಿನಗಳು | ಆಯುಕ್ತರು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು |
| 14 | ಸೇವಾ ಪೂರ್ವ ಅವಧಿ ಘೋಷಣೆ | ನಿರ್ದೇಶಕರು | 90 ದಿನಗಳು | ಆಯುಕ್ತರು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು |
| 15 | ಮನೆ.ನಿವೇಶನ & ವಾಹನ ಖರೀದಿ ಹಾಗೂ ಮಾರಾಟಕ್ಕಾಗಿ ಅನುಮತಿ | ನಿರ್ದೇಶಕರು<br>ನಿರ್ದೇಶಕರು<br>ವೇತನ ಸೆಳೆಯುವ ಅಧಿಕಾರಿ | 30 ದಿನಗಳು | ಆಯುಕ್ತರು<br>ನಿರ್ದೇಶಕರು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು<br>ಆಯುಕ್ತರು | 30 ದಿನಗಳು |
| 16 | ಬೋಧಕ/ಬೋಧಕೇತರ ಸಿಬ್ಬಂದಿಗಳ ರಾಜೀನಾಮೆ ಅಂಗೀಕಾರ | ಆಯುಕ್ತರು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು |
| 17 | ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು, ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಕೇಂದ್ರ ಕಛೇರಿಯ ಸಿಬ್ಬಂದಿ ವರ್ಗದವರಿಗೆ ಸಾಮೂಹಿಕ ವಿಮೆ/ಕುಟುಂಬ ಕಲ್ಯಾಣ ನಿಧಿ ಮಂಜೂರಾತಿ | ನಿರ್ದೇಶಕರು<br>ಜಂಟಿ ನಿರ್ದೇಶಕರು<br>ಪ್ರಾಂಶುಪಾಲರು | 15 ದಿನಗಳು | ನಿರ್ದೇಶಕರು | 15 ದಿನಗಳು | ಆಯುಕ್ತರು | 15 ದಿನಗಳು |
| 18 | ವೈದ್ಯಕೀಯ ವೆಚ್ಚ ಮರುಪಾವತಿ | ನಿರ್ದೇಶಕರು<br>ಜಂಟಿ ನಿರ್ದೇಶಕರು | 60 ದಿನಗಳು | ಆಯುಕ್ತರು | 30 ದಿನಗಳು | ಪ್ರಧಾನ ಕಾರ್ಯದರ್ಶಿಗಳು | 30 ದಿನಗಳು |

*ಕಾಲೇಜು ಮತ್ತು ಪ್ರಾಂತೀಯ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುವ ಡಿ ಗುಂಪಿನ ನೌಕರರಿಗೆ, ಸೇವಾಪೂರ್ವಾವಧಿ ಘೋಷಣೆ ಮಾಡಲು ಹೆಸರಿಸಲಾದ ಅಧಿಕಾರಿ ಅನುಕ್ರಮವಾಗಿ ಪ್ರಾಂಶುಪಾಲರು ಮತ್ತು ಜಂಟಿ ನಿರ್ದೇಶಕರುಗಳಾಗಿರುತ್ತಾರೆ

**ಪ್ರಾಂತೀಯ ಜಂಟಿ ನಿರ್ದೇಶಕರ ಮತ್ತು ಪ್ರಾಂಶುಪಾಲರ ಸಮೂಹ ವಿಮೆ/ ಕುಟುಂಬ ಕ್ಷೇಮನಿಧಿಗೆ ಹೆಸರಿಸಲಾದ ಅಧಿಕಾರಿ ನಿರ್ದೇಶಕರು

* - ಅಧಿಸೂಚನೆ ಸಂಖ್ಯೆ: ಸಿಆಸುಇ 197 ಸಾಸೇಖಾ 2012/ಪಿ, ದಿನಾಂಕ: 18/6/2013 ರ ಮೂಲಕ ಸೇರಿಸಲಾಗಿದೆ.